# ‘ದ್ಯಾವ್ರೆ’ಗೆ ಭಟ್ಟರ ಅಭಯ!



ಗಡ್ಡ ವಿಜಿ ನಿರ್ದೇಶನದ ‘ದ್ಯಾವ್ರೆ’ ಚಿತ್ರದ ಕುರಿತ ನಿರೀಕ್ಷೆಗಳು ನಿಧಾನವಾಗಿ ಗರಿಗಟ್ಟಿಕೊಳ್ಳತೊಡಗಿವೆ. ಯೋಗರಾಜ ಭಟ್ ಅವರ ಗರಡಿಯಲ್ಲಿನ ಹುಡುಗರ ಚಿತ್ರಗಳು ಗೆಲ್ಲುತ್ತಿರುವ ದಿನಗಳಿವು. ಭಟ್ಟರ ಶಿಷ್ಯರಾದ ಪವನ್ ಒಡೆಯರ್ ಅವರ ‘ಗೂಗ್ಲಿ’ ಯಶಸ್ಸು ಕಂಡಿದೆ. ವಿಕಾಸ್ ನಿರ್ದೇಶನದ ‘ಜಯಮ್ಮನ ಮಗ’ ಚಿತ್ರ ಕೂಡ ಪ್ರೇಕ್ಷಕರ ಗಮನಸೆಳೆದಿದೆ. ಹೀಗಾಗಿ ವಿಜಿಯ ‘ದ್ಯಾವ್ರೆ’ ಬಗ್ಗೆಯೂ ಗಾಂಧಿನಗರದಲ್ಲಿ ಒಳ್ಳೆಯ ಮಾತುಗಳು ಕೇಳಿಬರುತ್ತಿವೆ.

ವಿಜಿ ಬಗ್ಗೆ ಸ್ವತಃ ಭಟ್ಟರು ಒಳ್ಳೆಯ ಮಾತುಗಳನ್ನಾಡಿದ್ದಾರೆ. ಭಟ್ಟರ ಚಿತ್ರಕಥಾ ತಂಡ ಹಾಗೂ ಶೂಟಿಂಗ್ ಯೂನಿಟ್‌ನಲ್ಲಿ ತನ್ನ ಪಾಡಿಗೆ ತಾನು ಕೆಲಸ ಮಾಡಿಕೊಂಡಿದ್ದ ವಿಜಿಯನ್ನು ನಿರ್ದೇಶನದ ರಿಂಗ್‌ಗೆ ಒತ್ತಾಯಪೂರ್ವಕವಾಗಿ ತಳ್ಳಿದ್ದೇ ಭಟ್ಟರು. ಯಾವುದೋ ಕಾರಣದಿಂದಾಗಿ ವಿಜಿ ಉತ್ಸಾಹ ಕಳೆದುಕೊಂಡಾಗ ಆತನಲ್ಲಿ ಆತ್ಮವಿಶ್ವಾಸ ತುಂಬಿದವರೂ ಅವರೇ. ಅಷ್ಟು ಮಾತ್ರವಲ್ಲ, ‘ದ್ಯಾವ್ರೆ’ ಚಿತ್ರದಲ್ಲಿ ಮುಖ್ಯಪಾತ್ರವೊಂದಲ್ಲಿ ನಟಿಸುವ ಮೂಲಕ ಶಿಷ್ಯನ ಬೆಂಬಲಕ್ಕೆ ಅವರು ಗಟ್ಟಿಯಾಗಿ ನಿಂತಿದ್ದಾರೆ. ಇವೆಲ್ಲವೂ ‘ದ್ಯಾವ್ರೆ’ ಬಗೆಗಿನ ನಿರೀಕ್ಷೆಗಳು ಹೆಚ್ಚಲಿಕ್ಕೆ ಪೂರಕ ಕಾರಣಗಳು.

‘ದ್ಯಾವ್ರೆ’ ಚಿತ್ರದಲ್ಲಿ ಭಟ್ಟರದು ಜೈಲರ್‌ನ ಪಾತ್ರ. ಖಾಕಿ ಯೂನಿಫಾರ್ಮ್ ತೊಟ್ಟು, ಗನ್ ಹಿಡಿದಿರುವ– ಮೊಬೈಲ್ ಫೋನನ್ನೂ ಗನ್‌ನಂತೆ ಹಿಡಿದಿರುವ– ಭಟ್ಟರ ಚಿತ್ರಗಳು ಕುತೂಹಲ ಕೆರಳಿಸುವಂತಿವೆ. ಪ್ರಸ್ತುತ ಹಿಂದಿ ಸಿನಿಮಾದ ಕನವರಿಕೆಯಲ್ಲಿ ಅವರು ಮುಂಬೈನಲ್ಲಿ ಠಿಕಾಣಿ ಹೂಡಿದ್ದರೂ, ಶಿಷ್ಯನ ಚಿತ್ರದ ಮೂಲಕ ಗಾಂಧಿನಗರದಲ್ಲೂ ಸುದ್ದಿಯಲ್ಲಿರುವುದು ವಿಶೇಷ.

ಜಯಣ್ಣ, ಭೋಗೇಂದ್ರ ಹಾಗೂ ರಾಜೇಶ್‌ಭಟ್ ‘ದ್ಯಾವ್ರೆ’ ಚಿತ್ರದ ನಿರ್ಮಾಪಕರು. ಚಿತ್ರದ ಶೂಟಿಂಗ್ ಈಗಾಗಲೇ ಮುಗಿದಿದ್ದು, ಮಾತಿನ ಮರುಲೇಪನ ನಡೆಯುತ್ತಿದೆ. ವೀರ ಸಮರ್ಥ್ ಸಂಗೀತ, ಗುರುಪ್ರಶಾಂತ್ ಪಿ. ರೈ ಛಾಯಾಗ್ರಹಣ ಇರುವ ಈ ಚಿತ್ರದ ತಾರಾಗಣದಲ್ಲಿ ಯೋಗರಾಜ್ ಭಟ್ ಅವರೊಂದಿಗೆ ನೀನಾಸಂ ಸತೀಶ್, ಸೋನುಗೌಡ, ಸೋನಿಯಾಗೌಡ, ಶ್ವೇತಾ ಪಂಡಿತ್ ಮುಂತಾದವರಿದ್ದಾರೆ.

■ ರಘು

